IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)
An International Open Access, Peer-reviewed, Refereed Journal

# ಈಶಾನ್ಯರಾಜ್ಯ ಸಿಕ್ಕಿಂನ ವಿಭಿನ್ನ ಸಂಸ್ಕೃತಿಯ ಆಚರಣೆಗಳು

**ಕೆ.ಎನ್.ಶಿವಪ್ರಸಾದ್**
ಸಂಶೊಧನಾರ್ಥಿ (20203KAN0003)
ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ
ಬೆಂಗಳೂರು –560064

**ಡಾ.ಕೆ.ಮಲರ್‌ವಿಳಿ**
ಮಾರ್ಗದರ್ಶಕರು
ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ
ಬೆಂಗಳೂರು –560064

ಈಶಾನ್ಯ ರಾಜ್ಯಗಳಲ್ಲಿ ಮುಖ್ಯವಾದ ಒಂದು ರಾಜ್ಯವೆಂದರೆ ಅದು ಸಿಕ್ಕಿಂ ರಾಜ್ಯ. ಈ ಸಿಕ್ಕಿಂ ರಾಜ್ಯ ಭೌಗೋಳಿಕವಾಗಿ ಹೆಚ್ಚು ಪ್ರಸಿದ್ಧಿ ಪಡೆದು ಅನೇಕ ಪ್ರವಾಸಿಗರನ್ನು ತನ್ನ ಬಾಹ್ಯ ಮತ್ತು ಆಂತರಿಕ ಸೌಂದರ್ಯದಿಂದ ವರ್ಷದ ಎಲ್ಲಾ ಕಾಲದಲ್ಲಿಯೂ ಕೈಬೀಸಿ ಕರೆಯುವ ರಾಜ್ಯವಾಗಿದೆ. ಅಲ್ಲಿ ಎಲ್ಲಾ ರೀತಿಯ ಸೌಂದರ್ಯಕ್ಕೆ ದೇಶ–ವಿದೇಶದ ಜನರು ಮರುಳಾಗಿ ತಮ್ಮ ಪ್ರವಾಸದ ಸ್ಥಳವನ್ನಾಗಿ ಹಾಗೂ ಅಲ್ಲಿನ ಸಾಹಿತ್ಯ, ಭಾಷೆ, ಧರ್ಮ, ಜನಾಂಗ, ಇತ್ಯಾದಿಯಾಗಿ ಒಟ್ಟಾರೆ ಸಂಸ್ಕೃತಿಯ ಸ್ವರೂಪವನ್ನು ತಿಳಿಯಲು ಕೂಡ ಅನೇಕ ಜನರು ಈ ರಾಜ್ಯದತ್ತ ಧಾವಿಸುತ್ತಿದ್ದಾರೆ.

ಹೀಗೆ ಹಲವು ರೀತಿಗಳಿಂದ ಪ್ರಸಿದ್ಧಿ ಪಡೆದಿರುವ ಭಾರತ ದೇಶದ ಈಶಾನ್ಯ ರಾಜ್ಯಗಳಲ್ಲಿ ಒಂದಾದ ಸಿಕ್ಕಿಂನ ಪ್ರವಾಸವನ್ನು ಕೈಗೊಂಡು ತಮ್ಮ ಹಲವು ರೀತಿಯ ವಿವಿಧ ಅನುಭವಗಳನ್ನು ತಮ್ಮದೇ ಆದ ಸಾಹಿತ್ಯದ ಪರಿಭಾಷೆಗಳಲ್ಲಿ ರಸವತ್ತಾಗಿ ಬರಹಕ್ಕೆ ಇಳಿಸಿರುವ ಶ್ರೇಷ್ಠತೆಯು ನಮ್ಮ ಸಾಹಿತ್ಯದ ಲೇಖಕರು, ಕವಿ, ನಾಟಕಕಾರರಾದ ಬೇಲೂರು ರಘುನಂದನ್ ಅವರಿಗೆ ಸಲ್ಲುತ್ತದೆ. ಅವರ ಪ್ರವಾಸ ಕಥನಕ್ಕೆ **'ಜೀವನ್ಮುಖಿ ತೀಸ್ತಾ'** ಎಂದು ಶೀರ್ಷಿಕೆ ಕೊಟ್ಟಿರುವುದು ಬಹಳ ಮುಖ್ಯವಾಗಿದೆ. ಆರಂಭದ ಮುನ್ನುಡಿಯಲ್ಲಿ ಅವರೇ ಹೇಳುವಂತೆ ಈಡೀ ಸಿಕ್ಕಿಂ ರಾಜ್ಯಕ್ಕೆ ಜೀವ ನೀಡುವ ಜೀವನದಿಯಾಗಿ ತೀಸ್ತಾ ನದಿಯು ಹೊರಹೊಮ್ಮಿರುವುದು ಹಾಗೂ ಪ್ರವಾಸದುದ್ದಕ್ಕೂ ಲೇಖಕರ ಜೊತೆಗೂಡುವುದರಿಂದ ಅದರ ನೆನಪು ಲೇಖಕರ ಮನಸ್ಸಿನ ಮೇಲೆ ಎಷ್ಟರಮಟ್ಟಿಗೆ ಭೀರಿದೆ ಎಂಬುದರ ಜೊತೆಗೆ ತೀಸ್ತಾ ನದಿಯ ಬಹು ಮುಖ್ಯ ಪಾತ್ರವೇನೆಂಬುದು ತಿಳಿದುಬರುತ್ತದೆ.

ಸಿಕ್ಕಿಂ ರಾಜ್ಯವನ್ನು ಪೂರ್ವ ಸಿಕ್ಕಿಂ ಜಿಲ್ಲೆ, ಪಶ್ಚಿಮ ಸಿಕ್ಕಿಂ ಜಿಲ್ಲೆ, ಉತ್ತರ ಸಿಕ್ಕಿಂ ಜಿಲ್ಲೆ, ದಕ್ಷಿಣ ಸಿಕ್ಕಿಂ ಜಿಲ್ಲೆಗಳಾಗಿ ವಿಭಾಗಗಳಾಗಿರುವುದನ್ನು ತಿಳಿಸಿ ಅದರ ಹಾಗೆಯೇ ಪ್ರವಾಸವನ್ನು ಆರಂಭಿಸಿರುವ ಲೇಖಕರು ಅಲ್ಲಿನ ಪ್ರತೀ ಅನುಭವವನ್ನು ಸಹ ಅಲ್ಲಿನ ಸನ್ನಿವೇಶಕ್ಕೆ ಅನುಗುಣವಾಗಿ ರಸವತ್ತಾಗಿ ಚಿತ್ರಿಸಿದ್ದಾರೆ. ಸಿಕ್ಕಿಂ ರಾಜ್ಯ ಭಾರತದ ಈಶಾನ್ಯ ಭಾಗದಲ್ಲಿ ಚೀನಾದ

ಜೊತೆ ತನ್ನ ಗಡಿಯನ್ನು ಹಂಚಿಕೊಂಡಿರುವ ಅತೀ ಚಿಕ್ಕ ರಾಜ್ಯ. ಈ ಪುಟ್ಟ ರಾಜ್ಯ ಕಡಿಮೆ ಜನಸಂಖ್ಯೆಯನ್ನು ಹೊಂದಿದ್ದರೂ ಕೂಡ ಅದು ತನ್ನಲ್ಲಿನ ವಿಭಿನ್ನ ಸೌಂದರ್ಯದಿಂದ ಇಡೀ ಪ್ರಪಂಚಕ್ಕೆ ಪರಿಚಿತವಾಗಿರಲು ಕಾರಣಗಳನ್ನು ತಮ್ಮ ಪ್ರವಾಸದ ಜೊತೆ ಜೊತೆಗೆ ಎಳೆ ಎಳೆಯಾಗಿ ಬಿಡಿಸಲಾಗಿದೆ.

ಪ್ರತಿಯೊಂದು ರಾಜ್ಯದ ಸಂಸ್ಕೃತಿಯನ್ನು ನಾವು ಅಧ್ಯಯನ ಮಾಡಬೇಕಾದರೆ ಮೊದಲಿಗೆ ಹಲವು ವಿಭಾಗಗಳಾಗಿ ವಿಂಗಡಿಸಿಕೊಳ್ಳಬೇಕಾಗುತ್ತದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಅಲ್ಲಿನ ಪ್ರಾಕೃತಿಕ ಪರಿಸರ, ಅಲ್ಲಿ ಭೌಗೋಳಿಕತೆ, ಜನಾಂಗ, ಭಾಷೆ, ಧರ್ಮ, ಆಚಾರ–ವಿಚಾರ, ಹಬ್ಬ–ಹರಿದಿನ, ಶಿಕ್ಷಣ, ರಾಜಕೀಯ ಹೀಗೆ ಇನ್ನೂ ಹಲವು ವಿಭಿನ್ನವಾದ ವಿಶೇಷ ಅಂಶಗಳನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ.

### ವಿವಿಧ ಸಂಸ್ಕೃತಿಯ ಆಚರಣೆಗಳು

ಸಿಕ್ಕಿಂ ರಾಜ್ಯದಲ್ಲಿ ಲೆಪ್ಚಾ, ಬುಟಿಯಾ ಮತ್ತು ನೇಪಾಳಿ ಬುಡಕಟ್ಟಿನ ಜನರು ಹೆಚ್ಚಾಗಿ ಕಂಡು ಬರುತ್ತಾರೆ. ಲೆಪ್ಚಾ ಬುಡಕಟ್ಟಿನವರು ಇಲ್ಲಿನ ಮೂಲ ನಿವಾಸಿಗಳಾದರೆ ಬುಟಿಯಾ ಮತ್ತು ನೇಪಾಳಿ ಬುಡಕಟ್ಟಿನ ಜನರು ವಲಸೆ ಬಂದಿದ್ದಾರೆ. ಪ್ರತಿಯೊಬ್ಬ ಮಾನವನ ತನ್ನ ಜೀವಕ್ಕಾಗಿ ಜೀವನಕ್ಕಾಗಿ ಗಡಿ ಪ್ರದೇಶಗಳನ್ನೂ ಮೀರಿ ವಲಸೆ ಬಂದು ತನ್ನ ನೆಲೆಯನ್ನು ಕಟ್ಟಿಕೊಳ್ಳುತ್ತಾನೆ. ಅದೇ ರೀತಿ ಇಲ್ಲಿ ಲೆಪ್ಚಾ ಬುಡಕಟ್ಟಿಗಿಂತ ಹೆಚ್ಚಾಗಿ ಬುಟಿಯಾ ಹಾಗೂ ನೇಪಾಳಿ ಜನರು ಹೆಚ್ಚಿದ್ದಾರೆ. ಈ ಬುಡಕಟ್ಟುಗಳ ಸಂಸ್ಕೃತಿ, ಆಚಾರ–ವಿಚಾರ, ಉಡುಗೆ–ತೊಡುಗೆಗಳು ವಿಭಿನ್ನವಾಗಿದ್ದು ಅವರವರದೇ ಆದ ವಿಶೇಷ ಉಡುಗೆ, ಹಬ್ಬಗಳನ್ನು ಆಚರಿಸುವುದು ಇಲ್ಲಿ ಸಿಗುತ್ತದೆ.

ಸಿಕ್ಕಿಂನಲ್ಲಿ ಹೆಚ್ಚು ಬೌದ್ಧ ಸಮುದಾಯದವರು ಇರುವ ಕಾರಣ ಅವರು ಹಲವು ರೀತಿಯ ಹಬ್ಬಗಳನ್ನು ಆಚರಿಸುತ್ತಾರೆ. ಅವುಗಳೆಂದರೆ ಸಾಗಾ ದಾವಾ, ದೃಕ್ ಪಾ ತೇಶಿ, ಗುರು ದಿನ್ ಪೋ ಚೆ ಟ್ರಂಗ್‌ಕಾರ್ ತ್ಸೆಚು, ಪಂಗ್ ಲ್ಹಾಬ್ ಸಾಲ್, ಲಾಹ್‌ಬಾಬ್ ಧ್ಯೂಚೆನ್, ಲೂಸುಂಗ್, ನಾಮ್ ಸೂಂಗ್, ಗುಟಾರ್, ಬಮ್ ಚೂ, ಕಾಲಚಕ್ರ ಪೂಜೆ ಹೀಗೆ ಇನ್ನೂ ಹಲವು ಹಬ್ಬಗಳನ್ನು ತಮ್ಮ ಬೌದ್ಧ ಧರ್ಮದ ಕ್ಯಾಲೆಂಡರ್‌ಗೆ ಅನುಗುಣವಾಗಿ ವಿವಿಧ ಆಚರಣೆಗಳ ಮೂಲಕ ಆಚರಿಸುತ್ತಾರೆ. ನೇಪಾಳಿಗರು ದಸರಾ, ತಿಹಾರ್, ಸರಸ್ವತಿ ಪೂಜೆ, ಸಂಕ್ರಾಂತಿ, ಶಿವರಾತ್ರಿ, ಹೋಲಿ, ರಕ್ಷಾಬಂಧನ, ರಾಮನವಮಿ, ಶ್ರೀಕೃಷ್ಣ ಜನ್ಮಾಷ್ಟಮಿ, ವಿಶ್ವಕರ್ಮ ಪೂಜೆ, ದುರ್ಗಾ ಪೂಜೆ, ದೀಪಾವಳಿಗಳನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಸಿಕ್ಕಿಂನ ಧಾರ್ಮಿಕ ವಿಚಾರಗಳ ಮತ್ತೊಂದು ವಿಶೇಷವೆಂದರೆ ಬಣ್ಣ ಬಣ್ಣದ ಪ್ರಾರ್ಥನಾ ಬಾವುಟಗಳು. ಈ ಬಾವುಟಗಳು ಬೆಟ್ಟಗಳ ಮೇಲೆ, ಜಲಪಾತಗಳ ಬಳಿ, ಮನೆಗಳ ಮುಂದೆ, ದೇವಸ್ಥಾನಗಳ ಹತ್ತಿರ ಇತ್ಯಾದಿ ಕಡೆಯೆಲ್ಲಾ ಕಣ್ಣಿಗೆ ಗೋಚರಿಸುತ್ತವೆ. ಈ ವರ್ಣಮಯ ಧ್ವಜಗಳು ಸಿಕ್ಕಿಂ ಸಂಸ್ಕೃತಿಯ ಭಾಗವಾಗಿವೆ. ಈ ಬಾವುಟಗಳನ್ನು ಇಲ್ಲಿನ ಜನರು ತಮ್ಮ ನಂಬಿಕೆಗಳಿಗೆ ಅನುಗುಣವಾಗಿ ಕುದುರೆಯ ಚಿತ್ರವಿರುವ, ನವಿಲಿನ ಚಿತ್ರವಿರುವ ಬಾವುಟಗಳನ್ನು ಬಳಸುತ್ತಾರೆ. ಇಲ್ಲಿನ ಪ್ರತಿಯೊಂದು ಬುಡಕಟ್ಟಿನ ಜನರೂ ಕೂಡ ಈ ಬಾವುಟಗಳನ್ನು ತಮಗೆ ಅದೃಷ್ಟದ ಸಂಕೇತವಾಗಿ, ವಿಜಯದ ಸಂಕೇತವಾಗಿ, ಯಶಸ್ಸಿನ ಸಂಕೇತವಾಗಿ, ಮದುವೆಯ ಸಂದರ್ಭದಲ್ಲಿ, ಹಬ್ಬ–ಹರಿದಿನಗಳಲ್ಲಿ, ನಾಮಕರಣ, ಶ್ರಾದ್ಧಗಳ ಸಂದರ್ಭಗಳಲ್ಲಿ ಬಳಸುತ್ತಾರೆ. ಬೇರೆ ಬೇರೆ ಬಣ್ಣದ ಬಾವುಟಗಳನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಕಾರ್ಯಕ್ರಮಗಳಿಗನುಗುಣವಾಗಿ ಕಟ್ಟಿಸುವುದು ಇಲ್ಲಿನ

ವಾಡಿಕೆ. ಬೌದ್ಧರ ಆಚರಣೆಯಲ್ಲಿ ಮತ್ತೊಂದು ಮುಖ್ಯವಾದುದೆಂದರೆ ಪ್ರಾರ್ಥನಾ ಚಕ್ರಗಳು ಇವು ಬೌದ್ಧರಿಗೆ ಅತ್ಯಂತ ಪ್ರಮುಖವಾದವುಗಳು. ಸಿಕ್ಕಿಂನ ಯಾವ ಬೌದ್ಧ ಸ್ತೂಪಗಳಿಗೆ ಹೋದರೂ ಕೂಡ ಅಲ್ಲಿ ದೊಡ್ಡ ಚಕ್ರಗಳಿಂದ ಹಿಡಿದು ಅತೀ ಚಿಕ್ಕ ಚಕ್ರಗಳೂ ಕಾಣಸಿಗುತ್ತವೆ. ಇದರ ಸುತ್ತಲೂ ಬೌದ್ಧರ ಹಲವು ಶ್ಲೋಕಗಳು, ಸಂಕೇತಗಳನ್ನು ಬರೆಸಿರುತ್ತಾರೆ.

ಪ್ರತಿಯೊಂದು ಪ್ರದೇಶ, ರಾಜ್ಯ, ದೇಶವು ತನ್ನಲ್ಲಿರುವ ಅನೇಕ ಧರ್ಮಗಳಿಂದ ಅದರಲ್ಲಿನ ವಿವಿಧ ರೀತಿಯ ಆಚರಣೆಗಳಿಂದ ತನ್ನ ಘನತೆಯನ್ನು ಹೆಚ್ಚಿಸಿಕೊಳ್ಳುತ್ತದೆ. ಹಾಗೆಯೇ ಸಿಕ್ಕಿಂ ಕೂಡ ತನ್ನ ಒಡಲಿನಲ್ಲಿರುವ ಹಿಂದೂ, ಕ್ರೈಸ್ತ, ಬೌದ್ಧ ಧರ್ಮದವರ ವಿವಿಧ ರೀತಿಯ ಆಚರಣೆಗಳಿಂದ ದೇಶದೆಲ್ಲೆಡೆ ಪ್ರಸಿದ್ಧಿಯನ್ನು ಪಡೆದಿದೆ. ಸಿಕ್ಕಿಂ ರಾಜ್ಯವು ಬಹುತೇಕ ಬೌದ್ಧ ಧರ್ಮವನ್ನು ಹೊಂದಿದ್ದು ಇವರ ಆರಾಧನ ಸ್ಥಳಗಳೆಂದೇ ಪ್ರಸಿದ್ದಿಯನ್ನು ಪಡೆದಿರುವ ಮೊನಾಸ್ಟ್ರಿ(ಬೌದ್ಧ ಸಂಘಾರಾಮ)ಗಳು ಸಿಕ್ಕಿಂನೆಲ್ಲೆಡೆ ಕಂಡುಬರುತ್ತವೆ. ಟಿಬೇಟ್‌ನ ಬೌದ್ಧ ಸಂಘಾರಾಮವನ್ನು ಬಿಟ್ಟರೆ ವಾಸ್ತುಶಿಲ್ಪದಲ್ಲಿ 'ರುಮ್ತೇಕ್ ಮೊನಾಸ್ಟ್ರಿ'ಗೆ ಅತ್ಯುತ್ತಮ ಸ್ಥಾನ. ಅಲ್ಲದೇ ಸಿಕ್ಕಿಂನಲ್ಲಿಯೂ ಕೂಡ ಅತೀ ದೊಡ್ಡ ಮೊನಾಸ್ಟ್ರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಕಂಗ್ಯೂ ಎಂಬ ಬುದ್ದನ ಬೋಧನೆಗಳನ್ನು ಇಲ್ಲಿ ಉಪದೇಶ ಮಾಡಲಾಗುತ್ತದೆ. 'ಥಂಕಾ' ಎಂಬ ಶೈಲಿಯಲ್ಲಿ ಬೌದ್ಧರ ವರ್ಣಚಿತ್ರಗಳು ಇಲ್ಲಿನ ಗೋಡೆಗಳ ಮೇಲೆ ರಾರಾಜಿಸುತ್ತಿರುವುದು ಕಂಡುಬರುತ್ತದೆ. ಒಂದು ಸಾವಿರ ಬುದ್ದನ ಚಿನ್ನದ ಪ್ರತಿಮೆಗಳು ಇಲ್ಲಿರುವುದು ವಿಶೇಷ ಹಾಗಾಗಿಯೇ ಇಲ್ಲಿ ಸರ್ಕಾರದ ಬಿಗಿ ಭದ್ರತೆಗಗಳು ಹೆಚ್ಚು. ಜಗತ್ತಿಗೆ ಶಾಂತಿಯನ್ನು ಸಾರಿದ್ದ ಬುದ್ಧನಿಗೆ ಇಷ್ಟೆಲ್ಲಾ ಸೆಕ್ಯೂರಿಟಿ ಬೇಕಾ ಎನ್ನುವ ಪ್ರಶ್ನೆಗಳು ಮೂಡಿದರೂ ಕೂಡ ಭಯೋತ್ಪಾದಕರ ಭಯದಿಂದ ಇದು ಅನಿವಾರ್ಯ ಎನಿಸುತ್ತದೆ.

ಕೇವಲ ದೇವಸ್ಥಾನಗಳಷ್ಟೇ ಧಾರ್ಮಿಕ ಕ್ಷೇತ್ರಗಳಾಗದೇ ಇಲ್ಲಿನ ಪ್ರತೀ ಕಾಡು, ಅರಣ್ಯ, ಅಲ್ಲಿನ ಪ್ರತೀ ಮರ, ಗಿಡ, ಸಸ್ಯಗಳೂ ಕೂಡ ಪವಾಡಗಳ ಮೂಲಕ ದೇವರಾಗಿರುವುದು ಕಂಡುಬರುತ್ತದೆ. ಸಮುದ್ರ ಮಟ್ಟದಿಂದ 8,400 ಅಡಿ ಎತ್ತರದಲ್ಲಿರುವ ರಾಣಿದುಂಗ್ ಎಂಬಲ್ಲಿರುವ ಬಂಡೆಯೂ ಕೂಡ ಬೌದ್ಧರು ಮತ್ತು ಹಿಂದೂಗಳು ಪವಿತ್ರ ಸ್ಥಳವೆಂದು ಪ್ರಾರ್ಥನೆಯನ್ನು ಸಲ್ಲಿಸುತ್ತಾರೆ. ಈ ರಾಣಿದುಂಗ್‌ಗೆ ಹೋಗುವ ಮಾರ್ಗದಲ್ಲಿರುವ 'ಓಕ್' ಮರವನ್ನು 'ರಾಮಾವೃಖ್' ರಾಮನ ಮರವೆಂಬುದಾಗಿ ಒಂದು ಸ್ಥಳ ಪುರಾಣವಾಗಿ ನಿರ್ಮಿಸಿ ಇಲ್ಲಿನ ಜನರು ಪೂಜಿಸುವ ಸಂಪ್ರದಾಯವಿದೆ. ಪ್ರಕೃತಿಯು ನಮಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುತ್ತಿರುವುದರಿಂದ ಅದಕ್ಕೂ ನಮಗೂ ಒಂದು ಅವಿನಾನುಭವ ಸಂಬಂಧವಿರುವುದನ್ನು ತಿಳಿಯುತ್ತೇವೆ. ಹಾಗಾಗಿ ನಾವು ನಿಸರ್ಗವನ್ನು ಸ್ಥಳ ಪುರಾಣಗಳನ್ನು, ಜನಪದ ಕಥೆಯನ್ನು ಸೃಷ್ಟಿಸಿ ಪೂಜಿಸುವುದು ಸಾಮಾನ್ಯ ಜನರ ಸಂಸ್ಕೃತಿಯಲ್ಲಿ ಬೆರೆತುಕೊಂಡಿರುವುದು ಪ್ರತಿಯೊಬ್ಬನನ್ನು ಜಿಜ್ಞಾಸೆಗೆ ಒಳಗಾಗಿಸುತ್ತದೆ.

**ಶಿವಪ್ರಸಾದ್ ಕೆ.ಎನ್**

ಸಂಶೋಧನಾ ವಿದ್ಯಾರ್ಥಿ

ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ, ಬೆಂಗಳೂರು.

**ಪರಾಮರ್ಶನ ಗ್ರಂಥಗಳು**

- ಉಪಸಂಸ್ಕೃತಿ ಅಧ್ಯಯನ – ಬರಗೂರು ರಾಮಚಂದ್ರಪ್ಪ, ಸಾಹಿತ್ಯ ಅಕಾಡೆಮಿ, 1993.
- ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ – ಚಿ.ಸಿ. ನಿಂಗಣ್ಣ,
- ಸಂಸ್ಕೃತಿ ಅಧ್ಯಯನ – ಡಾ॥ ನಂ. ತಪಸ್ವೀನಂದಕುಮಾರ್, ಚಾಮುಂಡಿ ಎಂಟರ್‌ಪ್ರೈಸಸ್.
- ಜೀವನ್ಮುಖಿ ತೀಸ್ತಾ – ಬೇಲೂರು ರಘುನಂದನ್, ಕನ್ನಡ ಸಾಹಿತ್ಯ ಅಕಾಡೆಮಿ, 2016.